"ಮಧುರ ಮಕ್ಕಳೇ - ಆಮೆಯ ಹಾಗೆ ಎಲ್ಲವನ್ನು ತನ್ನಲ್ಲಿ ಸಮಾವೇಶ ಮಾಡಿಕೊಂಡು ಶಾಂತಿಯಲ್ಲಿ ಕುಳಿತು ಸ್ವದರ್ಶನಚಕ್ರವನ್ನು ತಿರುಗಿಸಿ, ತಂದೆ ಸರ್ವಸಂಬಂಧದ ಸ್ಯಾಕ್ರಿನ್ ಆಗಿದ್ದಾರೆ, ಅವರನ್ನು ನೆನಪು ಮಾಡಿದ್ದೇ ಆದರೆ ನಿಮ್ಮ ವಿಕರ್ಮ ವಿನಾಶ ಆಗಿಬಿಡುತ್ತದೆ"

ಪ್ರಶ್ನೆ: ಈಶ್ವರೀಯ ಕುಲದ ಮಕ್ಕಳ ಪ್ರತಿ ತಂದೆಯ ಶ್ರೀಮತ ಏನಾಗಿದೆ?

ಉತ್ತರ: ನೀವು ಯಾವಾಗ ಈಶ್ವರನ ಮಕ್ಕಳಾಗಿದ್ದೀರೋ, ಅವರ ಸನ್ಮುಖದಲ್ಲಿ ಕುಳಿತಿದ್ದೀರೆಂದರೆ ಪ್ರೀತಿಯಿಂದ ಅವರನ್ನು ನೆನಪು ಮಾಡಿ. ಅವರ ಶ್ರೀಮತದಂತೆ ನಡೆಯಿರಿ. ಎಷ್ಟು ಅವರನ್ನು ನೆನಪು ಮಾಡುತ್ತೀರೋ ಅಷ್ಟು ನಶೆ ಇರುತ್ತದೆ. ಆದರೆ ಮಾಯಾ ರಾವಣ ನನ್ನ ಗ್ರಾಹಕರು ಹೇಗಿದ್ದಾರೆಂದು ಅಂದಾಗ ಅವನೂ ಸಹ ಯುದ್ಧ ಮಾಡುತ್ತಾನೆ. ತಂದೆಯು ಹೇಳುತ್ತಾರೆ ಮಕ್ಕಳೇ ಬಲಹೀನರಾಗಬೇಡಿ. ನಾನು ನಿಮಗೆ ಶಕ್ತಿಯನ್ನು ಕೊಡಲು ಕುಳಿತಿದ್ದೇನೆ.

ಗೀತೆ: ಧೈರ್ಯ ತಾಳು ಮಾನವನೇ... ... ...

ಓಂ ಶಾಂತಿ. ಮಕ್ಕಳನ್ನು ಮಕ್ಕಳೇ ಎಂದು ಯಾರು ಕರೆಯುತ್ತಾರೆ, ಏಕೆಂದರೆ ಆತ್ಮನಿಗೆ ಮಾನವ ಎಂದು ಕರೆಯಲಾಗುತ್ತದೆ. ಆತ್ಮನಲ್ಲಿಯೇ ಮನಸ್ಸು-ಬುದ್ಧಿ ಇದೆ. ಅಂದಾಗ ಈ ಹೆಸರೂ ಸಹ ಇಡಲಾಗಿದೆ. ಬಹಳ ವಸ್ತುಗಳಿಗೆ ಬಹಳ ಹೆಸರುಗಳಂತೂ ಇಟ್ಟಿದ್ದಾರೆ, ಹೇಗೆ ಪರಮಪಿತ ಪರಮಾತ್ಮ, ಬಾಬಾ, ಕೆಲವರು ಫಾದರ್ ಎಂದು ಕರೆಯುತ್ತಾರೆ. ಅಂದಾಗ ಬಾಬಾ ಎನ್ನುವುದು ಎಲ್ಲದಕ್ಕಿಂತ ಸಾಧಾರಣವಾಗಿದೆ. ನೀವು ಯಾರ ಸಂತಾನರಾಗಿದ್ದೀರಿ, ಅವರ ನೆನಪು ಬರುತ್ತದೆಯೇ? ಎಂದು ತಂದೆ ಕೇಳುತ್ತಾರೆ. ಈಗ ತಾವು ಮಕ್ಕಳು ಕುಳಿತಿದ್ದೀರಿ ಎದುರಿನಲ್ಲಿ ಯಾರಿದ್ದಾರೆ? ಆತ್ಮರು ಬಾಬಾ ಕುಳಿತಿದ್ದಾರೆ ಎಂದು ಹೇಳುತ್ತಾರೆ. ಎಷ್ಟು ಸಾಧಾರಣ ಮಾತಾಗಿದೆ. ಮಕ್ಕಳಿಗೆ ಗೊತ್ತಿದೆ ನಾವಾತ್ಮರಿಗೆ ಪರಮಪಿತ ಪರಮ ಆತ್ಮ ಪಿತನಾಗಿದ್ದಾರೆ. ಮನುಷ್ಯರಾದರೆ ಚಿಕ್ಕವರು-ದೊಡ್ಡವರಿಗೆ ಎಲ್ಲರಿಗೂ ಬಾಬಾ ಎಂದು ಹೇಳಿಬಿಡುತ್ತಾರೆ ಆದರೆ ಇಲ್ಲಿ ಆತ್ಮ ತನ್ನ ತಂದೆಗೆ ಬಾಬಾ ಎಂದು ಕರೆಯುವುದು. ಓ ಗಾಡ್ ಫಾದರ್ ಎಂದು ಹೇಳುತ್ತಾರೆ. ಈಗ ಶಾರೀರಕ ತಂದೆಗೆ ಗಾಡ್ ಫಾದರ್ ಎಂದು ಕರೆಯುವುದಿಲ್ಲ. ನಿಮಗೆ ಗೊತ್ತಿದೆ ನಾವು ಅಂತಹ ತಂದೆಯ ಸನ್ಮುಖದಲ್ಲಿ ಕುಳಿತಿದ್ದೇವೆ, ಇದು ಆತ್ಮನ ವಿಷಯವಾಗಿದೆ ನಾನು ಯಾರು! ಎನ್ನುವುದನ್ನು ಶಿವಬಾಬಾ ತಿಳಿಸುತ್ತಾರೆ. ನಾನು ಪರಮ ಆತ್ಮನಾಗಿದ್ದೇನೆ. ನಾನು ನೀವು ಆತ್ಮರೆಲ್ಲರಿಗೂ ಪರಮಧಾಮದಲ್ಲಿರುವ ಪಿತನಾಗಿದ್ದೇನೆ, ಆದ್ದರಿಂದ ನನ್ನನ್ನು ಪರಮ ಆತ್ಮ ಎಂದು ಕರೆಯುತ್ತಾರೆ. ಒಟ್ಟಿಗೆ ಸೇರಿಸಿದರೆ ಪರಮಾತ್ಮ ಆಗುತ್ತದೆ. ಎಷ್ಟು ಸಹಜವಾಗಿದೆ. ಇಲ್ಲಿ ಯಾರು ಕುಳಿತಿದ್ದಾರೆ? ಶಿವತಂದೆ, ಅವರಿಲ್ಲವೆಂದರೆ ಈ ಬ್ರಹ್ಮನೂ ಸಹ ಇರುತ್ತಿರಲಿಲ್ಲ. ನೀವು ಮಕ್ಕಳ ಮನಸ್ಸಿನಲ್ಲಿ ಸದಾ ಅವರ ನೆನಪು ಇರುತ್ತದೆ. ಅವರೂ ಆತ್ಮನಾಗಿದ್ದಾರೆ, ಯಾವುದೇ ಅಂತರವಿಲ್ಲ. ಹೇಗೆ ಆತ್ಮ ನಕ್ಷತ್ರ ಸಮಾನ ಇರುತ್ತದೆ, ಆ ನಕ್ಷತ್ರ ಸಾಕ್ಷಾತ್ಕಾರವಾಗುತ್ತದೆ. ಹಾಗೆಯೇ ತಂದೆಯೂ ಸಹ ನಕ್ಷತ್ರ ರೂಪದಲ್ಲಿ ಸಾಕ್ಷಾತ್ಕಾರ ಆಗುತ್ತಾರೆ. ಬಾಕಿ ಇವರು ಬಹಳ ತೇಜೋಮಯವಾಗಿರುತ್ತಾರೆ, ಸಹನೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಏನು ಹೇಳುತ್ತಾರೋ ಅದು ಮನಸ್ಸಿನ ಭಾವನೆಯಾಗಿದೆ. ಆದರೆ ತಂದೆ ತಾವು ಹೇಗೆ ಆತ್ಮರಿದ್ದೀರೋ ಹಾಗೆಯೇ ನಾನೂ ಸಹ ಆತ್ಮನಾಗಿದ್ದೇನೆಂದು ಯಥಾರ್ಥವನ್ನು ತಿಳಿಸುತ್ತಿದ್ದಾರೆ. ನಾನೂ ಸಹ ಈ ತನುವಿನಲ್ಲಿ (ಬ್ರಹ್ಮಾರವರಲ್ಲಿ) ಈ ಆತ್ಮನ ಪಕ್ಕ ಭೃಕುಟಿಯಲ್ಲಿ ಕುಳಿತುಕೊಳ್ಳಬೇಕು. ಅವರು ಕುಳಿತು ನೀವು ಆತ್ಮರಲ್ಲಿ 84 ಜನ್ಮಗಳ ಪಾತ್ರ ತುಂಬಿದೆ ಎಂದು ತಿಳಿಸುತ್ತಾರೆ. ಪ್ರತಿಯೊಬ್ಬ ಆತ್ಮನಲ್ಲಿ ತಮ್ಮ-ತಮ್ಮದೇ ಆದ ಪಾರ್ಟ್ ಇರುತ್ತದೆ. ಆತ್ಮ-ಪರಮಾತ್ಮ ಬಹಳ ಕಾಲದಿಂದ ಅಗಲಿ ಹೋದರು ಎಂದು ಹೇಳುತ್ತಾರೆ, ಈಗ ಪರಮಾತ್ಮನ ಶಬ್ದ ಸ್ಪಷ್ಟವಾಗಿದೆ. ಅವರಿಗೆ ಪರಮಾತ್ಮ ಎಂದು ಹೇಳುವುದರಿಂದ ತಬ್ಬಿಬ್ಬಾಗಿದ್ದಾರೆ. ಅವರೂ ಆತ್ಮನೇ ಆಗಿದ್ದಾರೆ ಆದರೆ ಪರಮಧಾಮದಲ್ಲಿ ಇರುವ ಪರಮಾತ್ಮನಾಗಿದ್ದಾರೆ. ಬ್ರಹ್ಮಾರವರಿಗೆ ಪರಮಾತ್ಮ ಎಂದು ಹೇಳುವುದಿಲ್ಲ. ಇವರೆಲ್ಲಾ ಜೀವಾತ್ಮರಾಗಿದ್ದಾರೆ. ಇವರಲ್ಲಿ ಕೆಲವರು ಪುಣ್ಯಾತ್ಮರು, ಕೆಲವರು ಪಾಪಾತ್ಮರಿದ್ದಾರೆ. ನನಗೆ ಪುಣ್ಯಾತ್ಮ, ಪಾಪಾತ್ಮ ಎಂದು ಹೇಳುವುದಿಲ್ಲವೆಂದು ತಂದೆಯು ತಿಳಿಸುತ್ತಾರೆ. ನನಗೆ ಪರಮಾತ್ಮ ಎಂದಷ್ಟೇ ಕರೆಯುತ್ತಾರೆ. ನನ್ನದೂ ಪಾತ್ರವಿದೆ. ಓಮ್ಮೆ ಬಂದು ಪತಿತ ಪ್ರಪಂಚವನ್ನು ಪಾವನ ಪ್ರಪಂಚವನ್ನಾಗಿ ಮಾಡುತ್ತೇನೆ. ಪತಿತಪಾವನ ಬನ್ನಿ ಎಂದು ನೆನಪು ಮಾಡುತ್ತಾರೆ. ಆದರೆ ನಾವು ಪತಿತರು ರಾವಣ ಸಂಪ್ರದಾಯದವರು ಎಂದು ಯಾರಾದರೂ ತಿಳಿದುಕೊಂಡಿದ್ದಾರೇನು. ರಾಮರಾಜ್ಯ ಬೇಕು ಎಂದು ಹೇಳುತ್ತಾರೆ. ರಾವಣನನ್ನು ಸುಡುತ್ತಾರೆ ಆದರೆ ನಾವೇ ರಾವಣ ಸಂಪ್ರದಾಯದವರೆಂದು ಗೊತ್ತಿಲ್ಲ. ಅವಶ್ಯವಾಗಿ ಪತಿತರಾಗಿದ್ದಾರೆ, ಆ ಕಾರಣ ಕರೆಯುತ್ತಾರೆ. ಕೃಷ್ಣನನ್ನಂತೂ ಕರೆಯುವುದಿಲ್ಲ. ಅವರಿಗೆ ಪರಮಾತ್ಮ ಎಂದು ಹೇಳುವುದಿಲ್ಲ. ನಮ್ಮೆಲ್ಲರ ತಂದೆ ಯಾರು ಪರಮಧಾಮದಿಂದ ಬಂದಿದ್ದಾರೆಯೋ ಅವರಿಗೆ ಪರಮಾತ್ಮ ಎಂದು ಹೇಳುತ್ತಾರೆ. ಈಶ್ವರ ಅಥವಾ ಭಗವಂತ ಎಂದು ಕರೆಯುವುದರಿಂದ ತಬ್ಬಿಬ್ಬಾಗುತ್ತಾರೆ. ತಂದೆ ಈ ಜೀವಾತ್ಮನ ಮೂಲಕ ತಿಳಿಸುತ್ತಾರೆ. ನಿಮಗೆ ಮಕ್ಕಳೇ ಅಶರೀರಿಭವ ಎಂದು ಹೇಳುತ್ತಾರೆ. ನೀವು ನನ್ನ ಮಕ್ಕಳಾಗಿದ್ದೀರಿ, ಆಗ ನಿಮ್ಮನ್ನು ಕಳುಹಿಸಲಾಗಿತ್ತು. ಸ್ವರ್ಗದಲ್ಲಿ ಶರೀರವನ್ನು

ಧಾರಣೆ ಮಾಡಿಕೊಂಡು ಬಂದಿದ್ದೀರಿ, ಚಕ್ರವನ್ನು ಸುತ್ತುತ್ತಾ-ಸುತ್ತುತ್ತಾ ಈಗ ನೀವು 84 ಜನ್ಮಗಳ ಚಕ್ರವನ್ನು ಪೂರ್ಣ ಮಾಡಿದ್ದೀರಿ. ಈ ಸಮಯದಲ್ಲಿ ಎಲ್ಲರೂ ರಾವಣನ ಸಂತಾನರಾಗಿದ್ದಾರೆ, ರಾವಣನೇ ನಿಮ್ಮನ್ನು ಪತಿತರನ್ನಾಗಿ ಮಾಡಿದ್ದಾನೆ. ಈಗ ನೀವು ಈಶ್ವರನ ಸಂತಾನರಾಗಿದ್ದೀರಿ. ಈಗ ತಂದೆ ಬಂದಿದ್ದಾರೆ. ಆಸುರಿ ಸಂಪ್ರದಾಯವನ್ನು ದೈವೀ ಸಂಪ್ರದಾಯವನ್ನಾಗಿ ಮಾಡುವುದೇ ನನ್ನ ಪಾತ್ರ ಆಗಿದೆ ಎಂದು ತಂದೆಯು ಹೇಳುತ್ತಾರೆ. ನಾನೂ ಸಹ ಡ್ರಾಮಾನುಸಾರವಾಗಿ ಸಮಯದಲ್ಲಿ ಬರುತ್ತೇನೆ- ಕಲ್ಪದ ಸಂಗಮಯುಗದಲ್ಲಿ ಬರುತ್ತೇನೆ. ಕಲಿಯುಗ ಪತಿತ, ಹಳೆಯ ತಮೋಪ್ರಧಾನ ಪ್ರಪಂಚವಾಗಿದೆ, ಆಗ ನಾನು ಸೂರ್ಯವಂಶಿ, ಚಂದ್ರವಂಶಿ ಕುಲದ ರಾಜ್ಯವನ್ನು ಸ್ಥಾಪನೆ ಮಾಡಲು ಬರುತ್ತೇನೆ. ಆ ರಾಜ್ಯ ಇಲ್ಲ ಆದ್ದರಿಂದ ಸ್ಥಾಪನೆ ಮಾಡುತ್ತೇನೆ. ಯಾವಾಗ ಸೂರ್ಯ, ಚಂದ್ರ ವಂಶ ಇರುತ್ತದೋ ಆಗ ವೈಶ್ಯ, ಶೂದ್ರ ವಂಶ ಇರುವುದಿಲ್ಲ. ಈಗ ನೀವು ದೈವೀ ಸಂತಾನರಾಗಲು ಈಶ್ವರೀಯ ಸಂತಾನರಾಗಿದ್ದೀರಿ. ಅಂದಾಗ ತಂದೆಯ ಜೊತೆ ಯೋಗ ಇರಬೇಕು ಯಾವುದರಿಂದ ವಿಕರ್ಮ ವಿನಾಶವಾಗುತ್ತದೆ. ಸದಾ ಐಶ್ವರ್ಯವಂತರು, ಸದಾ ಆರೋಗ್ಯವಂತರಾಗಿರಲು ಸ್ವದರ್ಶನಚಕ್ರವನ್ನು ತಿರುಗಿಸಬೇಕಾಗಿದೆ. ತಂದೆಯನ್ನು ನೆನಪು ಮಾಡಬೇಕು, ಇದರಲ್ಲೇ ಪರಿಶ್ರಮವಿದೆ. ಎಷ್ಟು ಸಮಯ ತಂದೆಯನ್ನು ನೆನಪು ಮಾಡುತ್ತೇನೆ ಎಂದು ಚಾರ್ಟ್ ಇಟ್ಟುಕೊಳ್ಳಿ. ಎಷ್ಟು ನೆನಪಿನಲ್ಲಿ ಇರುತ್ತೀರೋ ಅಷ್ಟು ಅತೀಂದ್ರಿಯ ಸುಖದ ಅನುಭವ ಆಗುತ್ತದೆ. ಆಗ ಅತೀಂದ್ರಿಯ ಸುಖವನ್ನು ಕೇಳಬೇಕೆಂದರೆ ಗೋಪೀವಲ್ಲಭನ ಗೋಪ-ಗೋಪಿಯರನ್ನು ಕೇಳಿ ಎಂದು ಹೇಳುತ್ತಾರೆ. ತಂದೆಗೆ ವಲ್ಲಭ ಎಂದು ಹೇಳಲಾಗುತ್ತದೆ. ತಂದೆಯ ರೂಪವೂ ಸಹ ಮಕ್ಕಳ ಹಾಗೆಯೇ ಇರುತ್ತದೆ. ಹೇಗೆ ಆತ್ಮರ ತಂದೆಯೂ ಸಹ ಆತ್ಮನೇ ಆಗಿದ್ದಾರೆ ಆದರೆ ಪರಮಧಾಮದಲ್ಲಿ ಇರುವವರು. ಒಂದುವೇಳೆ ಆ ಬೀಜ ಕೆಳಗೆ ಚಕ್ರದಲ್ಲಿ ಬಂದುಬಿಟ್ಟರೆ ವೃಕ್ಷವೇ ಮೇಲೆ ಹೋಗುತ್ತದೆ. ಹೇಗೆ ವೃಕ್ಷ ಇರುತ್ತದೆ ಅದಕ್ಕೆ ಬೀಜ ಕೆಳಗೆ, ವೃಕ್ಷ ಮೇಲಿರುತ್ತದೆ. ಆದರೆ ಇದು ಉಲ್ಟಾ ವೃಕ್ಷವಾಗಿದೆ, ಇದರ ಬೀಜ ಪರಮಾತ್ಮ ಪರಮಧಾಮದಲ್ಲಿ ನಿವಾಸ ಮಾಡುತ್ತಾರೆ. ಆತ್ಮರೂ ಸಹ ಪಾತ್ರ ಮಾಡಲು ಮೇಲಿಂದ ಕೆಳಗೆ ಬರುತ್ತಾರೆ. ನಂತರ ಕೊಂಬೆ, ರೆಂಬೆಗಳು ಬರುತ್ತಾ ಹೋಗುತ್ತದೆ, ಈಗ ತಂದೆಯು ಹೇಳುತ್ತಾರೆ ರಾವಣ ನಿಮ್ಮನ್ನು ಕಪ್ಪಾಗಿ ಮಾಡಿಬಿಟ್ಟಿದ್ದಾನೆ. ಈಗ ನೀವು ಸುಂದರರಾಗಬೇಕು. ಕೃಷ್ಣ ಹಾಗೂ ನಾರಾಯಣ ಇಬ್ಬರನ್ನೂ ಕಪ್ಪಾಗಿ ಮಾಡಿದ್ದಾರೆ. ಲಕ್ಷ್ಮೀಯನ್ನು ಸುಂದರವಾಗಿ ಮಾಡುತ್ತಾರೆ ಏಕೆ? ಕಾಮ ಚಿತೆಯ ಮೇಲೆ ಇಬ್ಬರೂ ಕುಳಿತಿರಬಹುದು. ಕೃಷ್ಣನಿಗಾದರೆ ವಿಷದ ಹಾವು ಕಚ್ಚಿದೆ ಎಂದು ಹೇಳುತ್ತಾರೆ, ನಾರಾಯಣನಿಗೆ ಏನು ಕಚ್ಚಿದೆ? ಏನೂ ತಿಳಿದುಕೊಳ್ಳುವುದಿಲ್ಲ. ಚಿತ್ರ ಮುಂತಾದಗಳನ್ನೂ ಸಹ ಎಲ್ಲವನ್ನೂ ರಾವಣನ ಮತದ ಮೇಲೆ ಮಾಡಿದ್ದಾರೆ. ಈಗ ತಂದೆ ಶ್ರೀಮತವನ್ನು ಕೊಟ್ಟು ರಾವಣನಿಂದ ಮುಕ್ತರನ್ನಾಗಿ ಮಾಡಲು ಬಂದಿದ್ದಾರೆ. ನಾನು ಎಲ್ಲರ ಸದ್ಗತಿದಾತನಾಗಿದ್ದೇನೆ, ಶ್ರೀ ಶ್ರೀ 108 ಜಗದ್ಗುರುವಿನ ಬಿರುದೂ ಸಹ ಇವರದೇ ಆಗಿದೆ, ಜಗತ್ತಿನ ಸದ್ಗತಿಯನ್ನು ಮಾಡುತ್ತಾರೆ. ಗ್ರಂಥದಲ್ಲಿ ಇವರ ಮಹಿಮೆ ಬಹಳಷ್ಟು ಬರೆದಿದ್ದಾರೆ. ಸದ್ಗುರು ಸತ್ಯಖಂಡವನ್ನು ಸ್ಥಾಪನೆ ಮಾಡುವವರಾಗಿದ್ದಾರೆ. ಬ್ರಹ್ಮಾತಂದೆಗೆ ಇವೆಲ್ಲಾ ಕಂಠ ಪಾಠವಾಗಿದೆ ಆದರೆ ಅರ್ಥ ಗೊತ್ತಿರಲಿಲ್ಲ. ತಮ್ಮನ್ನು ತಾವು ಧಾರ್ಮಿಕ ವ್ಯಕ್ತಿ ಎಂದು ತಿಳಿದಿದ್ದರು ಆದರೆ ರಾವಣನ ಕುಲದವರಾಗಿದ್ದರು. ಈಗ ನಾವು ಈಶ್ವರನ ಕುಲದವರಾಗಿದ್ದೇವೆ ಅಂದಾಗ ಅವರನ್ನು ಎಷ್ಟು ಪ್ರೀತಿಯಿಂದ ನೆನಪು ಮಾಡಬೇಕಾಗಿದೆ. ಬಾಬಾ ತಾವು ಎಷ್ಟು ಮಧುರವಾಗಿದ್ದೀರಿ. ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾರೆಂದರೆ ಹೆವನ್ಲೀ ಗಾಡ್ ಫಾದರನ್ನು ಎಷ್ಟು ನೆನಪು ಮಾಡುತ್ತೇವೆಯೋ ಅಷ್ಟು ನಶೆ ಏರುತ್ತದೆ. ಈಗ ಯಾರ ಮುಂದೆ ಕುಳಿತಿದ್ದೀರಿ? ಹೇ ಮುದ್ದಿನ ಮಕ್ಕಳೇ ನಾನು ನಿಮ್ಮ ಪರಮಪಿತ, ನೀವು ಆತ್ಮರ ಜೊತೆ ಮಾತನಾಡುತ್ತಿದ್ದೇನೆಂದು ತಂದೆಯು ಹೇಳುತ್ತಾರೆ. ಈಗ ನನ್ನ ಶ್ರೀಮತದ ಮೇಲೆ ಏಕೆ ನಡೆಯುವುದಿಲ್ಲ. ಆದರೆ ಕಾಮ ರೂಪಿ ಭೂತ ಬೀಳಿಸುತ್ತದೆ. ಬಲಹೀನರು ಏಕೆ ಆಗುತ್ತೀರಿ? ಎಂದು ತಂದೆ ಕೇಳುತ್ತಾರೆ. ಶ್ರೀಮತ ಸಿಕ್ಕಿದ ಮೇಲೆ ಆಸುರಿ ಮತದ ಮೇಲೆ ಏಕೆ ನಡೆಯುತ್ತೀರಿ? ಈ ಯುದ್ಧವಂತೂ ಮಾಡಲೇಬೇಕು. ಮಾಯೆ ನನ್ನ ಗ್ರಾಹಕರು ಬಲಹೀನರೆಂದು ತಿಳಿದಾಗ ಯುದ್ಧ ಮಾಡುತ್ತದೆ. ನಿಮಗೆ ತಂದೆ ಶಕ್ತಿ ಕೊಡುತ್ತಿದ್ದಾರೆ. ಇಷ್ಟು ಪಾಠವನ್ನು ಓದಿಸುತ್ತಾರೆ, ಎಲ್ಲಾ ವೇದ-ಶಾಸ್ತ್ರಗಳ ಸಾರವನ್ನು ತಿಳಿಸುತ್ತಾರೆ. ಸೂಕ್ಷ್ಮವತನದಲ್ಲಂತೂ ತಿಳಿಸುವುದಿಲ್ಲ. ವಿಷ್ಣುವಿನ ನಾಭಿಯಿಂದ ಬ್ರಹ್ಮಾ ಬಂದಿರುವುದನ್ನು ತೋರಿಸುತ್ತಾರೆ. ಸೂಕ್ಷ್ಮವತನದಲ್ಲಿ ನಾಭಿ ಎಲ್ಲಿಂದ ಬರುತ್ತದೆ? ಏನೇನು ಬರೆದಿದ್ದಾರೆ. ಈಗ ನಿಮಗೆ ಯಾವ ಜ್ಞಾನ ಸಿಗುತ್ತಿದೆಯೋ ಅದು ಪರಂಪರವಾಗಿ ನಡೆಯುವುದಿಲ್ಲ, ಇಲ್ಲಿಯೇ ಸಮಾಪ್ತಿ ಆಗುತ್ತದೆ. ಹಿಂದೆ ಏನು ಶಾಸ್ತ್ರ ಮುಂತಾದುಗಳನ್ನು ಮಾಡಿದ್ದಾರೋ ಅದು ಪರಂಪರವಾಗಿ ನಡೆಯುತ್ತದೆ, ಈ ಜ್ಞಾನವಂತೂ ಪ್ರಾಯಃಲೋಪವಾಗಿಬಿಡುತ್ತದೆ.

ಈಗ ತಂದೆ ನನ್ನ ಮತದ ಮೇಲೆ ನಡೆಯಿರಿ, ದೇಹೀ ಅಭಿಮಾನಿ ಆಗಿ, ಇದರಲ್ಲಿ ರೇಸ್ ಮಾಡಿ ನನ್ನ ಕೊರಳಿನ ಹಾರ ಆಗಿ ಎಂದು ಹೇಳುತ್ತಾರೆ. ಇದು ಬುದ್ಧಿಯ ರೇಸ್ ಆಗಿದೆ, ಸನ್ಯಾಸಿಗಳು ಅಶರೀರಿ ಭವ, ನನ್ನೊಬ್ಬನನ್ನೇ ನೆನಪು ಮಾಡಿ ಎಂದು ಹೇಳಲುಸಾಧ್ಯವಿಲ್ಲ. ಪರಮಾತ್ಮ ಎಲ್ಲರಿಗೂ ಹೇಳುತ್ತಾರೆ ಏಕೆಂದರೆ ಎಲ್ಲರೂ ನನ್ನ ಸಂತಾನರಾಗಿದ್ದಾರೆ, ಎಲ್ಲರನ್ನು ವಾಪಸ್ ಕರೆದುಕೊಂಡು ಹೋಗಲು ಬಂದಿದ್ದೇನೆ. ಆದರೆ ಸಮ್ಮುಖದಲ್ಲಿ ಮಕ್ಕಳು ಕೇಳುತ್ತಾರೆ ಪೂರ್ತಿ ಪ್ರಪಂಚ ಕೇಳುವುದಿಲ್ಲ. ಶಿವರಾತ್ರಿಯನ್ನು ಆಚರಣೆಮಾಡುತ್ತಾರೆ, ಶಿವನ ಮಂದಿರಗಳೂ ಸಹ ಇದೆ. ಅವಶ್ಯವಾಗಿ ಬಂದಿದ್ದಾರೆ ಆದರೆ ಶಿವನ ಚಿತ್ರ ಇಷ್ಟು ದೊಡ್ಡದು ಇಲ್ಲ. ಅವರು ನಕ್ಷತ್ರವಾಗಿದ್ದಾರೆ. ಒಂದುವೇಳೆ ತಿಳಿಸಿದರೆ ಮಂದಿರದ ಚಿತ್ರಗಳು ತಪ್ಪೇನು? ಎಂದು ಕೇಳುತ್ತಾರೆ. ಆದ್ದರಿಂದ ತಂದೆ ನಾನು ಆತ್ಮನಾಗಿದ್ದೇನೆ, ನೀವು ಕೇವಲ ಜನನ-ಮರಣದಲ್ಲಿ ಬರುತ್ತೀರಿ, ನಾನು ಬರುವುದಿಲ್ಲ, ಆಗ ನಿಮ್ಮನ್ನು ಮುಕ್ತರನ್ನಾಗಿ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸುತ್ತಾರೆ. ನಾನು ಪತಿತಪಾವನನಾಗಿದ್ದೇನೆ, ಅವಶ್ಯವಾಗಿ ಪತಿತ ಪ್ರಪಂಚದಲ್ಲಿಯೇ ಬರಬೇಕಾಗಿದೆ. ಒಂದುವೇಳೆ ಪತಿತಪಾವನ ಎಂದು ಕರೆದಿಲ್ಲವೆಂದರೆ ಹೊಸ ಪ್ರಪಂಚವನ್ನು ಮಾಡುತ್ತಾರೆಂದು

ತಿಳಿದುಕೊಳ್ಳುತ್ತಾರೆ. ಪ್ರಳಯವಾಗಿಬಿಡುತ್ತದೆ ನಂತರ ಹೊಸ ಸೃಷ್ಟಿಯನ್ನು ಸೃಷ್ಟಿಸಲಾಗುತ್ತದೆ. ಆದರೆ ಅವರಿಗೆ ಪತಿತಪಾವನ ಎಂದು ಕರೆಯುತ್ತಾರೆ ಅಂದಾಗ ಇದರಿಂದ ಸೃಷ್ಟಿ ಅನಾದಿಯಾಗಿದೆ, ಇದರ ಪ್ರಳಯ ಆಗುವುದಿಲ್ಲ ಎನ್ನುವುದು ಸಿದ್ಧವಾಗುತ್ತದೆ. ಕೇವಲ ಪತಿತ ಆಗುತ್ತದೆ ಆಗ ಪಾವನವನ್ನಾಗಿ ಸೃಷ್ಟಿಯನ್ನು ಮಾಡುತ್ತೇನೆ. ಆದ್ದರಿಂದ ನಿಮ್ಮನ್ನು ನರನಿಂದ ನಾರಾಯಣನನ್ನಾಗಿ ಮಾಡಲು ನಂದಿಗಣ ಅಥವಾ ಭಾಗ್ಯಶಾಲಿ ರಥದಲ್ಲಿ ಬರುತ್ತೇನೆ. ನಾವು ಸೂರ್ಯವಂಶದವರಾಗಬೇಕೆಂದು ಎಲ್ಲರೂ ಬಯಸುತ್ತಾರೆ. ಒಬ್ಬ ಭಕ್ತ ನಾನು ಲಕ್ಷ್ಮಿಯನ್ನು ವರಿಸುತ್ತೇನೆಂದು ಹೇಳುತ್ತಾನೆ-ಈ ರೀತಿ ಕಥೆಯೂ ಸಹ ಇದೆ. ನಾರದ ಭಕ್ತನಾಗಿದ್ದಾನಲ್ಲವೇ. ಅಂದಾಗ ಮುಖವನ್ನು ನೋಡಿಕೋ ಎಂದರು, ಮೊದಲು ಮಂಗನಿಂದ ಮಂದಿರಕ್ಕೆ ಲಾಯಕ್ ಆಗು ಆಗ ಲಕ್ಷ್ಮಿಯನ್ನು ವರಿಸಬಹುದು ಎಂದು ಹೇಳುತ್ತಾರೆ. ಈಗ ನೀವು ಮಂದಿರಕ್ಕೆ ಲಾಯಕರಾಗುತ್ತಿದ್ದೀರಿ. ಇದು ಈ ಸಮಯದ್ದೇ ಮಾತಾಗಿದೆ. ಇದೆಲ್ಲಾ ನಿಮಗೆ ಯಾರು ತಿಳಿಸುತ್ತಿದ್ದಾರೆ? ಶಿವಬಾಬಾ ಬ್ರಹ್ಮಾಬಾಬಾನ ಭೃಕುಟಿಯ ಮಧ್ಯದಲ್ಲಿ ಕುಳಿತು ನಿಮಗೆ ತಿಳಿಸುತ್ತಿದ್ದಾರೆ. ಹೇಗೆ ಇವರ ಆತ್ಮ ಭೃಕುಟಿಯ ಮಧ್ಯದಲ್ಲಿ ಇದೆಯೋ ಹಾಗೆ ಅವಶ್ಯವಾಗಿ ಅವರ ಪಕ್ಕದಲ್ಲಿ ಇರಬೇಕಲ್ಲವೇ. ಜ್ಞಾನಸಾಗರ ತಂದೆ ನಿಮಗೆ ಆದಿ-ಮಧ್ಯ-ಅಂತ್ಯದ ಪೂರ್ತಿ ರಹಸ್ಯಗಳನ್ನು ತಿಳಿಸುತ್ತಿದ್ದಾರೆ. ಯಾವುದರಿಂದ ನಿಮಗೆ ಸ್ವದರ್ಶನಚಕ್ರವನ್ನು ತಿರುಗಿಸುವುದು ಸಹಜವಾಗುತ್ತದೆ. ಸ್ವದರ್ಶನ ಚಕ್ರ ತಿರುಗಿಸುವುದರಿಂದ ನಿಮ್ಮ ವಿಕರ್ಮಗಳು ವಿನಾಶ ಆಗುತ್ತದೆ. ಇಲ್ಲವೆಂದರೆ ಶಿಕ್ಷೆಗಳನ್ನು ತಿನ್ನಬೇಕು. ವಿಜಯ ಮಾಲೆಯಲ್ಲೂ ಬರಲು ಸಾಧ್ಯವಿಲ್ಲ. ಆಮೆ ಹಾಗೆ ಯಾವಾಗ ಸಮಯ ಸಿಗುತ್ತದೋ ಆಗ ಶಾಂತವಾಗಿ ಕುಳಿತು ಚಕ್ರವನ್ನು ತಿರುಗಿಸಿ. ಈಗ ನೀವು ಮನೆಗೆ ವಾಪಸ್ ಹೋಗಬೇಕಾಗಿದೆ. ಈ ಅಂತಿಮ ಜನ್ಮದಲ್ಲಿ ಪವಿತ್ರರಾಗಿ. ಇದಕ್ಕೆ ಲೋಕಮರ್ಯಾದೆ ಎಂದು ಹೇಳುತ್ತಾರೆ, ಪತಿತರಾಗುವ ಮರ್ಯಾದೆಗಳನ್ನು ಬಿಡಿ ಮತ್ತೆ ಯಾರ ನೆನಪೂ ಮಾಡಬೇಡಿ. ನೀವು ಸತ್ತರೆ ನಿಮ್ಮ ಪಾಲಿಗೆ ಪ್ರಪಂಚವು ಸತ್ತುಹೋಗುತ್ತದೆ. ಅಶರೀರಿಯಾಗಿ ನನ್ನವರಾಗಿದ್ದೇ ಆದರೆ ವಿಕರ್ಮ ವಿನಾಶವಾಗುತ್ತದೆ. ಎಲ್ಲರೂ ಸಾಯಲೇಬೇಕು ಆಗ ಯಾರು ಯಾರಿಗಾಗಿ ಅಳುತ್ತಾರೆ? ಹಿರೋಷಿಮಾನಲ್ಲಿ ಎಲ್ಲರೂ ಸತ್ತು ಹೋದರು, ಯಾರೂ ಅಳುವಂತಹವರು ಉಳಿದಿಲ್ಲ. ಆದ್ದರಿಂದ ಈಗ ಅಳುವ ಪ್ರಪಂಚದಿಂದ ವಾಪಸ್ ಹೋಗಬೇಕು. ಈ ಕೆಟ್ಟ ಪ್ರಪಂಚದಲ್ಲಿ ಪ್ರತಿಯೊಬ್ಬರ ಅಂಗ-ಅಂಗದಲ್ಲಿ ಹುಳಗಳಿದೆ, ಅದನ್ನು ಏಕೆ ನೆನಪು ಮಾಡುತ್ತೀರಿ. ಸ್ವರ್ಗದ ಅಂತಹ ಶರೀರ ಇರುತ್ತದೇನು. ಅಲ್ಲಿ ಅಂಗ-ಅಂಗವೂ ಸುಂದರವಾಗಿರುತ್ತದೆ. ಬಾಬಾ ದುರ್ಗಂಧವನ್ನು (ಕೆಟ್ಟವಾಸನೆಯನ್ನು) ಸುಗಂಧಭರಿತ ಪುಷ್ಪವನ್ನಾಗಿ ಮಾಡುತ್ತಾರೆ. ಅವರೂ ಸಹ ಹಳೆಯ ಲಾಂಗ್ ಬೂಟಿನಲ್ಲಿ ಬರಬೇಕಾಗುತ್ತದೆ. ಬಾಬಾ ಹೇಳುತ್ತಾರೆ ಭಲೆ ಮನೆಯಲ್ಲಿ ಇರಿ ಆದರೆ ಶ್ರೀಮತದ ಮೇಲೆ ನಡೆಯಿರಿ. ವಿಕಾರದಲ್ಲಿ ಹೋಗಬೇಡಿ. ನಿಮ್ಮ ಎದುರಿನಲ್ಲಿ ಶಿವಬಾಬಾ ಕುಳಿತಿದ್ದಾರೆ, ಅವರನ್ನು ಮರೆಯಬೇಡಿ. ಒಳ್ಳೆಯದು.

ಗೀತೆ -ಧರತಿಯನ್ನು ಆಕಾಶ ಕರೆದಿದೆ ಧರತಿಮೇಲೆ ಇರುವವರನ್ನು ಆಕಾಶದಲ್ಲಿ ಇರುವ ತಂದೆ ಕರೆಯುತ್ತಾರೆ. ಈಗ ನನ್ನ ಹತ್ತಿರ ಬರಬೇಕು ಆದ್ದರಿಂದ ನಷ್ಟಮೋಹ ಆಗಿ. ನಾನು ನಿಮಗೆ ಸ್ವರ್ಗದ ಅಪಾರ ಸುಖ ಕೊಡುತ್ತೇನೆ. ತಂದೆ ಸರ್ವ ಸಂಬಂಧದ ಸಾಕ್ರಿನ್ ಆಗಿದ್ದಾರೆ. ಮಾಮಾ, ಚಿಕ್ಕಪ್ಪ ಇವರೆಲ್ಲಾ ನಿಮಗೆ ದುಃಖ ಕೊಡುವವರು. ನಿಮ್ಮದು ಪೂರ್ತಿ ಆಸುರಿ ಪ್ರಪಂಚ ನರಕದಿಂದ ಸನ್ಯಾಸವಾಗಿದೆ. ಸನ್ಯಾಸಿಗಳದು ಮನೆಯ ಸನ್ಯಾಸವಾಗಿದೆ. ನಿಮ್ಮದು ಈ ಕೊಳಕು ಪ್ರಪಂಚ ನರಕವನ್ನು ಮರೆಯಬೇಕು. ಈ ಸಮಯದಲ್ಲಿ ಮನುಷ್ಯರು ಸ್ವಲ್ಪ ಹಣ ಸಿಕ್ಕಿದರೂ ನಾವು ಸ್ವರ್ಗದಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಈ ಪ್ರಪಂಚದಲ್ಲಿ ಯಾರು ಎಷ್ಟೇ ಸಾಹುಕಾರರಾಗಿರಲಿ, ವಿಮಾನ ಮುಂತಾದುವುಗಳು ಬಿದ್ದರೆ ಎಲ್ಲಾ ಸಮಾಪ್ತಿ ಆಗುತ್ತದೆ, ನಂತರ ಅಳುತ್ತಾರೆ. ಅಲ್ಲಿ ಯಾಕ್ಸಿಡೆನ್ಸಿನ ಮಾತೇ ಇಲ್ಲ. ಯಾರೂ ಅಳುವುದಿಲ್ಲ. ಒಳ್ಳೆಯದು ನೀವು ಸ್ವರ್ಗದಲ್ಲಿ ಇದ್ದರೆ ಖುಷಿಯಾಗಿರಿ ಎಂದು ತಂದೆ ಹೇಳುತ್ತಾರೆ. ನಾನು ಬಂದಿರುವುದೇ ಬಡವರಿಗಾಗಿ, ಯಾರು ನರಕದಲ್ಲಿ ಇದ್ದಾರೆ. ದಾನವೂ ಸಹ ಬಡವರಿಗೇ ಮಾಡಲಾಗುತ್ತದೆ. ಸಾಹುಕಾರರು ಸಾಹುಕಾರರಿಗೆ ದಾನ ಮಾಡುತ್ತಾರೇನು. ಈ ಸಮಯದಲ್ಲಿ ಸಾಹುಕಾರರಂತೂ ತಮ್ಮ ಧನದ, ಫ್ಯಾಶನ್ನ ನಶೆಯಲ್ಲೇ ಮುಳುಗಿರುತ್ತಾರೆ.

ಒಳ್ಳೆಯದು. ಇದು ಇಂದ್ರಪ್ರಸ್ಥ, ಇಲ್ಲಿ ಹಂಸಗಳು ರತ್ನಗಳನ್ನು ಹಾರಿಸುಕೊಳ್ಳುತ್ತಾರೆ ಎಂದು ತಂದೆ ತಿಳುವಳಿಕೆ ಕೊಟ್ಟಿದ್ದಾರೆ. ಬಾಕಿ ಕೊಕ್ಕರೆ ಯಾರು ಇರುತ್ತಾರೋ ಅವರು ಕಲ್ಲುಗಳನ್ನೇ ಆರಿಸುಕೊಳ್ಳುತ್ತಾರೆ. ಆದ್ದರಿಂದ ಇಲ್ಲಿ ಹಂಸಗಳೇ (ಗುಣಗ್ರಹಣೆ ಮಾಡುವವರು) ಬರಬೇಕು, ಕೊಕ್ಕರೆ (ಅವಗುಣಗಳನ್ನು ನೋಡುವವರು) ಅಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯ ಶ್ರೀಮತದ ಮೇಲೆ ನಡೆದು, ದೇಹೀ-ಅಭಿಮಾನಿ ಆಗಿ ತಂದೆಯ ಕೊರಳಿನ ಹಾರ ಆಗಬೇಕು. ತಂದೆಯ ನೆನಪಿನಲ್ಲಿ ಇದ್ದು ಆತೀಂದ್ರಿಯ ಸುಖದ ಅನುಭವವನ್ನು ಮಾಡಬೇಕು.

2. ಈ ಪ್ರಪಂಚದಿಂದ ಪೂರ್ತಿ ನಷ್ಟೋಮೋಹಿ ಆಗಬೇಕು. ಯಾರದೇ ಛೀ-ಛೀ ಶರೀರವನ್ನು ನೆನಪು ಮಾಡಬಾರದು.

ವರದಾನ: ಸೇವೆಯ ಬಂಧನದ ಮುಖಾಂತರ ಕರ್ಮ-ಬಂಧನವನ್ನು ಸಮಾಪ್ತಿ ಮಾಡುವಂತಹ ವಿಶ್ವ ಸೇವಾಧಾರಿ ಭವ
ಪ್ರವೃತ್ತಿಯಲ್ಲಿರುತ್ತಾ ಎಂದೂ ಹೀಗೆ ತಿಳಿಯ ಬೇಡಿ ಇದು ಲೆಕ್ಕಾಚಾರವಾಗಿದೆ, ಕರ್ಮಬಂಧನವಾಗಿದೆ......ಆದರೆ ಇದೂ ಸಹ ಸೇವೆಯಾಗಿದೆ. ಸೇವೆಯ ಬಂಧನದಲ್ಲಿ ಬಂದಿತರಾಗುವುದರಿಂದ ಕರ್ಮ ಬಂಧನ ಸಮಾಪ್ತಿಯಾಗಿಬಿಡುವುದು. ಎಲ್ಲಿಯವರೆಗೆ ಸೇವಾಭಾವ ಇರುವುದಿಲ್ಲ ಅಲ್ಲಿ ಕರ್ಮಬಂಧನವು ಸೆಳೆಯುವುದು. ಕರ್ಮ ಬಂಧನ ವಿದ್ದಲ್ಲಿ ದುಃಖದ ಅಲೆ ಬರುವುದು ಮತ್ತು ಸೇವೆಯ ಬಂದನವಿದ್ದಲ್ಲಿ ಖುಷಿ ಇರುವುದು ಆದ್ದರಿಂದ ಕರ್ಮ ಬಂಧನವನ್ನು ಸೇವೆಯ ಬಂದನದಿಂದ ಸಮಾಪ್ತಿ ಮಾಡಿ. ವಿಶ್ವ ಸೇವಾಧಾರಿ, ವಿಶ್ವದಲ್ಲಿ ಎಲ್ಲೇ ಇರಲಿ ವಿಶ್ವ ಸೇವಾರ್ಥವಾಗಿರಿ.

ಸ್ಲೋಗನ್: ತಮ್ಮ ದೈವೀ ಸ್ವರೂಪದ ಸ್ಮೃತಿಯಲ್ಲಿದ್ದಾಗ ನಿಮ್ಮ ಮೇಲೆ ಯಾವುದೇ ವ್ಯರ್ಥ ದೃಷ್ಟಿ ಹೋಗಲು ಸಾಧ್ಯವಿಲ್ಲ.